**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 23.10.2024**

**ಪಾಟೀ ಸವಾಲುಃ ಶ್ರೀ ಸಿ ಎಸ್ ಪಿ ವಕೀಲರಿಂದ**

ದಾವಾ ಆಸ್ತಿಯ ಮೂಲ ಸರ್ವೆ ನಂ **42** ಒಟ್ಟು ವಿಸ್ತೀರ್ಣ **13** ಎಕ್ಕರೆ . ನಮ್ಮ ತಂದೆಗೆ ಅದರ ಪೈಕಿ **3** ಎಕ್ಕರೆ ಮಂಜೂರು ಆಗಿರುತ್ತದೆ . ಸದರಿ **3** ಎಕ್ಕರೆಗೆ ನಮ್ಮ ತಂದೆಯವರು ಸಂಪೂರ್ಣ ಮಾಲಿಕರು ಎಂದರೆ ಸರಿ . ಸದರಿ ದಾವಾಸ್ವತ್ತಿನ ಬಗ್ಗೆ ವ್ಯವಹರಿಸಲು ಸಂಪೂರ್ಣ ಹಕ್ಕು ನನ್ನ ತಂದೆಗೆ ಇತ್ತು ಎಂದರೆ ಸರಿ . ನನ್ನ ತಂದೆ ಆಗಿನ ಸುಂಟಿಕೊಪ್ಪ ಮುನಿಸಿಪಾಲಿಟಿಯಲ್ಲಿ ಇಂಜಿನ್ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದರು . ಅವರು ಆಂಗ್ಲ ಭಾಷೆಯಲ್ಲಿ ಮಂಜಯ್ಯ ಎಂದು ಸಹಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ಸಾಕ್ಷಿಗೆ ಒಂದು ಅಡವಾಣು ಪತ್ರವನ್ನು ತೋರಿಸಲಾಗಿ ಅದು ತನ್ನ ತಂದೆ ಗೋಪಾಲಯ್ಯ ನವರಿಗೆ ಅಡವಾಣು ಮಾಡಿದ ಪತ್ರ ಎಂದು ಗುರುತಿರುವ ಮೇರೆಗೆ ಅದನ್ನು ನಿಡಿ **2** ಎಂದು ಗುರುತಿಸಲಾಯಿುತು . ಲಿ ನಿಡಿ **2** ರಲ್ಲಿ ಮಂಜಯ್ಯ ಎನ್ನುವ ಸಹಿ ನನ್ನ ತಂದೆದೋ ಅಲ್ಲಮೋ ಎಂದು ಹೇಳಲು ಬರುವುದಿಲ್ಲ. ಗೋಪಾಲ ಎನ್ನುವವರು ಪ್ರತಿವಾದಿಯ ತಂದೆಯೆಂದರೆ ಸರಿ . ಸದರಿ ಅಡಮಾನ ಪತ್ರವನ್ನು ನನ್ನ ತಂದೆ ರೂ **3,400/-** ಗಳನ್ನು ಮರು ಪಾವತಿಸಿ **18.11.1980** ಕ್ಕೆ ರದ್ದುಗೊಳಿಸಬೇಕಿತ್ತು . ನನ್ನ ತಂದೆಯ ಜೀವಿತ ಕಾಲದಲ್ಲಾಗಲೀ ಅಥವಾ ಅವರ ಕಾಲಾ ನಂತರ ಸದರಿ ಅಡಮಾನ ಪತ್ರವನ್ನು ರದ್ದುಗೊಳಿಸಲಾಗಿದೆ ಇಲ್ಲಮೋ ಎಂದು ನನಗೆ ಗೊತ್ತಿಲ್ಲ. ಅಡಮಾನ ಪತ್ರ ರದ್ದಾಗಿದೆಯೋ ಇಲ್ಲಮೋ ಇಲ್ಲಿಯವರೆಗೆ ನಾನು ಯಾವುದೆ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ. ನನ್ನ ತಂದೆ ಜೀವಿತಕಾಲದಲ್ಲಾಗಲಿ ಅಥವಾ ಅವರ ಕಾಲಾ ನಂತರ ಹಣವನ್ನು ಬಡ್ಡಿ ಸಹಿತ ಮರು ಪಾವತಿ ಮಾಡಿ ನಿಡಿ **2** ಇಲ್ಲಿಯವೆಗೆ ರದ್ದಾಗಿಲ್ಲ ಎಂದರೆ ನನಗೆ

ಗೊತ್ತಿಲ್ಲ. ನಿಡಿ **1** ವಜಾ ಆದ ನಂತರ ಸುಬ್ಬಣ್ಣನವರು ಡಬ್ಲ್ಯೂ ಪಿ **19905/1979** ರಂತೆ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ . ಸಾಕ್ಷಿ ಸದರಿ ಮೇಲ್ಮನವಿ ಆದೇಶದ ದೃಡೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ **3** ಎಂದು ಗುರುತಿಸಲಾಯಿತು . ಸದರಿ ಆದೇಶದಲ್ಲಿ ಪುನರ ವಿಚಾರಣೆಗೆ ಆದೇಶವಾಗಿದೆ ಎಂದರೆ ಸರಿ . ಭೂ ನ್ಯಾಯಾಮಂಡಳಿಯ ಎಲ್ ಆರ್ ಎಮ್ **3** ಎ **1** **74-75** ರಂತೆ ಪುನರ್ ವಿಚಾರಣೆ ಮಾಡಿ ಆದೇಶ ಹೊರಡಿಸಿದ್ದಾರೆ ಎಂದರೆ ಸರಿ . ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ **4** ಎಂದು ಗುರುತಿಸಲಾಯಿತು. ನಿಡಿ **4** ರ ಆದೇಶವನ್ನು ಪ್ರಶ್ನಿಸಿ ಸುಬ್ಬಣ್ಣನವರು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ . ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ **5** ಎಂದು ಗುರುತಿಸಲಾಯಿುತು . ಅರ್ಜಿದಾರರು ಸದರಿ ರಿಟ್ ಅರ್ಜಿಯನ್ನು ವಾಪಸ್ಸು ಪಡೇದಿದ್ದಾರೆ . ನಂತರ ತಹಶೀಲ್ದಾರರು ಮಹಜರ ಮಾಡಿದ್ದಾರೆ ಎಂದರೆ ಸರಿ . ಸದರಿ ಮಹಜರನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಡಿ **6** ಎಂದು ಗುರುತಿಸಲಾಯಿತು . ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿ ಅದನ್ನು ಸಾಕ್ಷಿಯ ತಂದೆ ತಹಶೀಲ್ದಾರವರಿಗೆ ಬರೆದೆಕೊಂಡ ಅರ್ಜಿಯೆಂದರೆ ಸಾಕ್ಷಿ ಅದನ್ನು ನಿರಾಕರಿಸಿರುತ್ತಾರೆ .

ಮುಂದುವರಿದ ಪಾಟಿ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ